ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಸಚಿವರು).—

ಅ) ತಿಂಗಳಿಗೆ ರೂ ೨೭,೧೮೧ ಡಿಸೆಂಬರ್ ೧೯೭೭ ರಿಂದ ಸೆಪ್ಟೆಂಬರ್, ೧೯೮೮ರವರೆಗೆ ರೂ ೩೨, ೨೯,೫೯೭.

ಆ) ಲೋಕೋಪಯೋಗಿ ಇಲಾಖೆಯು ನಿಗದಿಗೊಳಿಸಿರುವ ಪ್ರತಿ ಚದುರ ಅಡಿ ಆಧಾರದ ಮೇಲೆ.

ಇ) ಇಲ್ಲ ಉದ್ಭವಿಸುವುದಿಲ್ಲ.

ಈ) ಸೂಕ್ತ ಸರ್ಕಾರಿ ಕಟ್ಟಡದ ಅಭಾವದಿಂದಾಗಿ.

ನೇಮಕಾತಿ ಸಮಿತಿಗಳಲ್ಲಿಯ ಭ್ರಷ್ಟಾಚಾರ

೪೦೯೮ ಶ್ರೀ ಬಿ ಎ. ಉಪ್ಪಿನ್. (ಕುಂದಗೋಳ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಸರ್ಕಾರದಿಂದ ನಿಯಮಿಸಲ್ಪಟ್ಟ ನೇಮಕಾತಿ ಸಮಿತಿಗಳಲ್ಲಿ ಭ್ರಷ್ಟಾಚಾರವು ನಡೆಯುತ್ತಿರುವುದರಿಂದ ಸಂದರ್ಶನದ ಕಾಲಕ್ಕೆ ಕೊಡಬೇಕಾದ ಅಂಕಗಳನ್ನು ಕಡಿಮೆಮಾಡಿ, ಮೆರಿಟಿಗೆ ಅನುಗುಣವಾಗಿ ಆಯ್ಕೆ ಮಾಡುವವಿಚಾರವು ಸರ್ಕಾರದಪರ ಮುಂದಿದೆಯೇ?

ಶ್ರೀ ಎಸ .ಆರ್.ಬೊಮ್ಮಾಯಿ. (ಮುಖ್ಯಮಂತ್ರಿಯವರು) —ನೇಮಕಾತಿ ಸಮಿತಿಗಳ ಮೂಲಕ ಆಯ್ಕೆ ಮಾಡಲು, ಸಂದರ್ಶನದ ಅಂಕವನ್ನು ಕಡಿಮೆ ಮಾಡಲು ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ಟೆಕ್ಸ್‌ಟೈಲ್ ಮಿಲ್‌ಗಳ ಸಂಖ್ಯೆ

೪೦೭೬ ಶ್ರೀ ಎಸ್.ಎಂ. ಜಿಡ್ಡಿಂತಾಯ (ಸುರತ್ಕಲ್) —ಮಾನ್ಯ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಟೆಕ್ಸ್‌ಟೈಲ್ಸ್ ಮಿಲ್ಸ್‌ಗಳ ಸಂಖ್ಯೆ ಎಷ್ಟು ?

ಆ) ಈ ಮಿಲ್ಸ್‌ಗಳಲ್ಲಿ ಕೆಲಸ ಮಾಡುತ್ತಿರುವ ಒಟ್ಟು ಕಾರ್ಮಿಕರ ಸಂಖ್ಯೆ ಎಷ್ಟು ?

ಇ) ಮೇಲ್ಕಂಡ ಮಿಲ್ಲುಗಳಲ್ಲಿ ಎಷ್ಟು ಮಿಲ್‌ಗಳು ಲಾಕ್‌ಔಟ್ ಆಗಿವೆ ?

ಈ) ಈ ಮಿಲ್ಸ್‌ಗಳ ಪುನರಾರಂಭಕ್ಕೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಜೆ.ಹೆಚ್. ಪಟೇಲ್(ಕೈಗಾರಿಕಾ ಮಂತ್ರಿಗಳು).—

ಅ) ಟೆಕ್ಸ್‌ಟೈಲ್ಸ್ ವಿಭಾಗದಲ್ಲಿ ಸುಮಾರು ೩೫೦೦ ಕಾರ್ಖಾನೆಗಳು ನೋಂದಾಯಿತವಾಗಿವೆ. ಅವುಗಳಲ್ಲಿ ೨೨ ದೊಡ್ಡ ಪ್ರಮಾಣದ ಟೆಕ್ಸ್‌ಟೈಲ್ಸ್, ಸ್ಪಿನ್ನಿಂಗ್ ಹಾಗೂ ವೀವಿಂಗ್ ಮಿಲ್ಸ್‌ಗಳು ಇವೆ.

ಆ) ನೊಂದಣಿಯಾಗಿರುವ ಕಾರ್ಖಾನೆಗಳಲ್ಲಿ ದುಡಿಯುತ್ತಿರುವ ಒಟ್ಟು ಕಾರ್ಮಿಕರ ಸಂಖ್ಯೆ ಸುಮಾರು ೩,೫೮,೮೦೦

ಇ) ಸದ್ಯಕ್ಕೆ ಬೆಂಗಳೂರಿನಲ್ಲಿಯ ಎನ್.ಟಿ.ಸಿ. ಸ್ವಾಮ್ಯಕ್ಕೆ ಸೇರಿದ ಮಿನರ್ವ ಮಿಲ್ಸ್ ಗುಲ್ಬರ್ಗಾದಲ್ಲಿಯ ಎಂ ಎಸ್.ಕೆ ಮಿಲ್ಸ್, ಲಾಕೌಟ್ ಆಗಿವೆ, ಮೈಸೂರಿನ ಕೆ.ಆರ್.ಮಿಲ್ಸ್ ಸಹಕಾರಿ ವಲಯದಲ್ಲಿಯ ರಾಯಚೂರು ಸ್ಪಿನ್ನಿಂಗ್ ಮಿಲ್ಸ್, ಬಳ್ಳಾರಿಯ ಸ್ಪಿನಿಂಗ್ ಮಿಲ್ಸ್ ಹಾಗೂ ಬಿಜಾಪುರದ ಸ್ಪಿನ್ನಿಂಗ್ ಮಿಲ್ಸ್‌ಗಳು ಕೆಲಸ ಮಾಡುತ್ತಿಲ್ಲ. ದಾವಣಗೆರೆ ಗಣೇಶರ್, ಸಿದ್ದೇಶ್ವರ ಹಾಗೂ ಚಿಗಟೇರಿ ಟೆಕ್ಸ್‌ಟೈಲ್ಸ್ ಮಿಲ್ಸ್ ಕೆಲಸ ಮಾಡುತ್ತಿಲ್ಲ. ಎನ್.ಟಿ.ಸಿ. ಮಿಲ್ಸ್‌ಗಳು ಬಿಟ್ಟು ಉಳಿದ ಮಿಲ್ಸ್‌ಗಳು ಹಣಕಾಸಿನ ಕಾರಣದಿಂದಾಗಿ ಕೆಲಸ ನಿಲ್ಲಿಸಿದೆ.